office@sanskrit.uni-mysore.ac.in
chairperson@sanskrit.uni-mysore.ac.in

**Tel.No**: 0821-2419822/821

**UNIVERSITY OF MYSORE**

**ಸಂಸ್ಕೃತ ಅಧ್ಯಯನ ವಿಭಾಗ–ಮಾನಸಗಂಗೋತ್ರಿ, ಮೈಸೂರು–570006**

-------------------------------------------------- --------------- (re-accredited by NAAC at "A" Grade)--------------------------------------------------

-----------------------------------( NIRF ranking 2022:Ranked 33th in University Category ad 54th in Overall Category)--------------------------------------------

**PGSKT/ /2024-245** **Date: 24-10-2024**

ಮೈಸೂರು ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದಲ್ಲಿ 2023 ಜುಲೈ 3 ರಿಂದ 14 ರ ವರೆಗೆ ಹತ್ತು ದಿನಗಳ ಉಚಿತ ಸಂಸ್ಕೃತ ಸಂಭಾಷಣ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ವಿಭಾಗದ ಅಧ್ಯಕ್ಷರಾದ ಪ್ರೊ.ವಿಜಯಕುಮಾರೀ ಕರಿಕಲ್ ರವರು ಸಂಸ್ಕೃತಭಾಷೆಯ ಮಹಿಮೆಯನ್ನು ಮತ್ತು ಇತಿಹಾಸವನ್ನು ಸವಿಸ್ತಾರವಾಗಿ ಪ್ರಸ್ತಾಪಿಸಿದರು. ಸಂಸ್ಕೃತ ವಿಭಾಗದ ಬೆಳವಣಿಗೆಗೆ ಅಗತ್ಯವಿರುವ ಎಲ್ಲ ಸಹಕಾರವನ್ನು ನೀಡಿ, ವಿಭಾಗವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆಂದು ನುಡಿದರು. ಮುಖ್ಯ ಅಭ್ಯಾಗತರಾಗಿ ಆಗಮಿಸಿದ್ದ ಅಮೇರಿಕಾ ದೇಶದಲ್ಲಿ ತಂತ್ರಜ್ಞರಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಕೃತ ಭಾರತಿಯ ಕಾರ್ಯಕರ್ತರಾದ ಶ್ರೀಯುತ ಎಸ್.ಸುಬ್ರಹ್ಮಣ್ಯರವರು ಕೃತಕಬುದ್ಧಿಮತ್ತೆ, ಯಂತ್ರಾಧ್ಯಯನ, ಅನುವಾದ ಮುಂತಾದ ಕ್ಷೇತ್ರಗಳಲ್ಲಿ ಸಂಸ್ಕೃತಜ್ಞರಿಗಿರುವ ವಿಪುಲ ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ವಿಭಾಗದ ಅತಿಥಿ ಉಪನ್ಯಾಸಕರಾದ ಡಾ.ಆರ್.ಸುರೇಶ, ಡಾ.ಸುರೇಶ್ ಹೆಗಡೆ, ಡಾ.ಎಸ್.ಎಂ.ಪುಷ್ಪಲತಾ ಹಾಗೂ ಸಂಸ್ಕೃತಭಾರತಿಯ ಮೈಸೂರು ವಿಭಾಗದ ಸಂಯೋಜಕರಾದ ಶ್ರೀ ಗಣೇಶದತ್ತ, ಶಿಬಿರದ ಸಂಚಾಲಕರಾದ ಶ್ರೀಮತಿ ಪರ್ವತವರ್ಧಿನೀ ಮುಂತಾದವರು ಉಪಸ್ಥಿತರಿದ್ದರು. ಶಿಬಿರವು ಸಂಜೆ 4 ರಿಂದ 6 ಗಂಟೆಯ ವರೆಗೆ ಮಾನಸಗಂಗೋತ್ರಿಯ ಸಂಸ್ಕೃತ ವಿಭಾಗದಲ್ಲಿ ನಡೆಯುತ್ತಿದ್ದು, 13 ವರ್ಷ ಮೇಲ್ಪಟ್ಟ ಎಲ್ಲರಿಗೂ ಹಾರ್ದಿಕ ಸ್ವಾಗತ.

----

A 10-day free spoken-Sanskrit-workshop is organized in the Sanskrit department, Manasagangotri, University of Mysore from July 3 to 14. The department chairperson Prof. Vijayakumari Karikal, while inaugurating the camp, spoke at length about the glorious legacy of Sanskrit. She assured to provide the sincere support to take the department to newer heights. Sri S.Subrahmanya, professionally a software engineer working in USA and passionately assoociated with Samskrita Bharati which is a voluntry organization, spoke about the enormous job opportunities for Sanskrit scholars in the field of artifical intelligence (AI), Mechine Learning, translation and so on. Guest faculties of the department Dr.R.Suresha, Dr.Suresh Hegde, Dr.S.M.Pushpalatha and Mysore divisional co-ordinator of Samskrita Bharati Sri Ganesha Datta and the camp facilitator Smt.Parvata Vardhini were present. The camp is open for all who are above 13 years of age. It is conducted between 4 to 6pm.

D.O.S. IN SANSKRIT
Manasagangothri
University of Mysore
MYSORE-570 006

# Free Spoken Sanskrit Workshop begins



Mysuru, July 5- A 10-day free Spoken Sanskrit Workshop has begun in the Sanskrit Department, Manasagangothri, University of Mysore, from July 3 to 14.

Department Chairperson Prof. Vijayakumari Karikal, while inaugurating the camp, spoke at length about the glorious legacy of Sanskrit. She assured to provide support to take the Department to newer heights.

Chief guest S. Subrahmanya, professionally a Software Engineer working in USA and passionately associated with Samskrita Bharati, which is a voluntary organisation, spoke about the **enormous job opportunities for Sanskrit scholars in the field of Artificial Intelligence (AI), Machine Learning, translation and so on.**

Guest Faculties of the Department Dr. R. Suresha, Dr. Suresh Hegde, Dr. S.M. Pushpalatha, Mysore Divisional Co-ordinator of Samskrita Bharati Ganesha Datta and the Camp Facilitator Parvata Vardhini were present. The camp, open for those above 13 years, is conducted between 4 pm - 6 pm. For details, contact Mob: 99808-33466.

# ಉಚಿತ ಸಂಸ್ಕೃತ ಸಂಭಾಷಣ ಶಿಬಿರ

ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ವಿಭಾಗ ಹಾಗೂ ಸಂಸ್ಕೃತ ಭಾರತಿಯ ಮೈಸೂರು ವಿಭಾಗದ ಸಂಯುಕ್ತಾಶ್ರಯದಲ್ಲಿ **10 ದಿನಗಳ ಉಚಿತ ಸಂಸ್ಕೃತ ಸಂಭಾಷಣ ಶಿಬಿರ**ವನ್ನು ಆಯೋಜಿಸಿದೆ. 13 ವರ್ಷ ಮೇಲ್ಪಟ್ಟ ಆಸಕ್ತ ತರುಣರು, ತರುಣಿಯರು, ಪುರುಷರು, ಮಹಿಳೆಯರು, ವಯೋವೃದ್ಧರು ಎಲ್ಲರೂ ಕೂಡ ಈ ಶಿಬಿರದಲ್ಲಿ ಭಾಗವಹಿಸಬಹುದು. ಈ ಶಿಬಿರದಲ್ಲಿ ಪಾಲ್ಗೊಳ್ಳಲು ಯಾವ ಪೂರ್ವಾರ್ಹತೆಯೂ ಬೇಕಿರುವುದಿಲ್ಲ. ಎಲ್ಲರಿಗೂ ಸ್ವಾಗತ.

**ಜುಲೈ 3 ರಿಂದ ಜುಲೈ 14 ರ ವರೆಗೆ**

(ಶನಿವಾರ ಮತ್ತು ಭಾನುವಾರ ಶಿಬಿರವಿರುವುದಿಲ್ಲ)




**ಸಂಜೆ 4 ರಿಂದ 6 ರ ವರೆಗೆ**

(ಪ್ರತಿದಿನ ೨ ಗಂಟೆಗಳು)

**ಸಂಸ್ಕೃತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ**

ಮೈಸೂರು

**ಸಂಪರ್ಕಿಸಿ**

**ಡಾ. ಆರ್. ಸುರೇಶ** 9980833466

(ಅತಿಥಿ ಉಪನ್ಯಾಸಕರು, ಸಂಸ್ಕೃತ ವಿಭಾಗ, ಮೈಸೂರು ವಿ.ವಿ.)

**ಗಣೇಶ ದತ್ತ** 8277609280

(ಸಂಯೋಜಕರು, ಮೈಸೂರು ವಿಭಾಗ, ಸಂಸ್ಕೃತ ಭಾರತೀ)


ಉಚಿತ
ಸಂಸ್ಕೃತ


# ಪ್ರಾದೇಶಿಕ ಭಾಷೆಗಳ ಅಭಿವೃದ್ಧಿಗೆ ತಾಯಿ ಬೇರು ಸಂಸ್ಕೃತ

**ಮೈಸೂರು:** ಸಂಸ್ಕೃತ ಭಾಷೆಯ ಮೂಲಕ ಭಾವೈಕ್ಯತೆ, ದೇಶಭಕ್ತಿ ಹಾಗೂ ನಮ್ಮ ಸಂಸ್ಕೃತಿ ಬಗೆಗಿನ ಅಭಿಮಾನ ಬೆಳೆಸಿಕೊಳ್ಳಲು ಸಾಧ್ಯ ಎಂದು ವಿದ್ವಾಂಸ ಡಾ.ಎಚ್.ವಿ.ನಾಗರಾಜರಾವ್ ಹೇಳಿದರು.

ಮೈಸೂರು ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗ ಹಾಗೂ ಸಂಸ್ಕೃತ ಭಾರತೀ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಉಚಿತ ಸಂಸ್ಕೃತ ಸಂಭಾಷಣಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಸಂಸ್ಕೃತ ಭಾಷೆ, ಭಾರತದ ಎಲ್ಲ ಪ್ರಜೆಗಳ ಭಾಷೆಯಾಗಿದೆ. ಎಲ್ಲ ಪ್ರಾದೇಶಿಕ ಭಾಷೆಗಳ ಅಭಿವೃದ್ಧಿಗೆ ತಾಯಿ ಬೇರಾದ ಸಂಸ್ಕೃತ ಭಾಷೆಯನ್ನು ಪೋಷಿಸುವುದು ಅಗತ್ಯ ಎಂದರು.

ಸಂಸ್ಕೃತ ಭಾಷೆಯನ್ನು ಕನ್ನಡ ಸೇರಿದಂತೆ ಪ್ರಾದೇಶಿಕ ಭಾಷೆಗಳ ವಿರೋಧಿಯಾಗಿ ನೋಡಬಾರದು. ಬದಲಾಗಿ ಪೂರಕ ಭಾಷೆಯಾಗಿ ನೋಡುವುದನ್ನು ಕಲಿಯಬೇಕು. ಎಲ್ಲ ಭಾಷೆಗಳ ಅಭಿವೃದ್ಧಿಗೆ ಸಂಸ್ಕೃತದ ಕೊಡುಗೆ ಅಪಾರ. ಆದ್ದರಿಂದ ಎಲ್ಲ ಭಾಷೆಗಳ ಅಧ್ಯಯದ ಜತೆಗೆ ಸಂಸ್ಕೃತ ಭಾಷೆಯನ್ನು ಅಧ್ಯಯನ ಮಾಡಬೇಕು. ಆಗ ಪ್ರಾದೇಶಿಕ ಭಾಷೆಗಳು ಶುದ್ಧತೆ ಪಡೆಯುವ ಜತೆಗೆ ಇಡೀ ದೇಶದ ಏಕತೆಯೂ ಸುಲಭವಾಗುತ್ತದೆ. ಸಂಕುಚಿತ ಮಾನೋಭಾವ ದೂರ ಮಾಡಿ ದೇಸಿ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಯಾವುದೇ ಭೇದಭಾವ ಇಲ್ಲದೆ ಭಾರತೀಯರು ಅಭಿಮಾನದಿಂದ ಸಂಸ್ಕೃತ ಅಧ್ಯಯನ ಮಾಡಬೇಕು ಎಂದರು. ಸಂಸ್ಕೃತ ವಿಭಾಗದ ಮುಖ್ಯಸ್ಥೆ ಪ್ರೊ.ವಿಜಯಕುಮಾರಿ ಕರಿಕಲ್ ಮಾತನಾಡಿದರು. ಶಿಬಿರದ ಸಂಚಾಲಕರಾದ ಡಾ.ರುಕ್ಮಾಂಗದ ಅವರನ್ನು ಅಭಿನಂದಿಸಲಾಯಿತು. ಸಂಸ್ಕೃತ ತಜ್ಞ ಎಚ್.ಎಸ್.ಸುದರ್ಶನ, ಪ್ರಾಧ್ಯಾಪಕರಾದ ಡಾ.ಆರ್.ಸುರೇಶ, ಡಾ.ರಾಚೋಟಿ ದೇವರು, ಡಾ.ಸುರೇಶ್ ಹೆಗಡೆ, ಡಾ.ಎಸ್.ಎಂ.ಪುಷ್ಪಲತಾ ಇದ್ದರು.

ವಿಜಯವಾಣಿ ಚಿತ್ರ



**ಮೈಸೂರು ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗ ಆಯೋಜಿಸಿದ್ದ ಉಚಿತ ಸಂಸ್ಕೃತ ಸಂಭಾಷಣ ಶಿಬಿರದ ಸಮಾರೋಪ ಸಮಾರಂಭ ದಲ್ಲಿ ಡಾ.ಎಚ್.ವಿ.ನಾಗರಾಜ ರಾವ್, ಪ್ರೊ.ವಿಜಯಕುಮಾರಿ, ಎಚ್.ಎಸ್.ಸುದರ್ಶನ ಭಾಗವಹಿಸಿದ್ದರು.**

# ನಮ್ಮೂರಲ್ಲಿಂದು

■ **ಪ್ರಾತ್ಯಕ್ಷಿಕೆ ಪ್ರದರ್ಶನ:** ವಾಹನಕ್ಕೆ ಜೈವಿಕ ಇಂಧನ ಬಳಕೆ ಕುರಿತು ಪ್ರಾತ್ಯಕ್ಷಿಕೆ ಪ್ರದರ್ಶನ. ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್. ಅತಿಥಿಗಳು: ಡಾ.ವೈ.ಎಸ್.ವರದರಾಜನ್, ಸ್ಥಳ: ಎನ್‌ಐಇ ಕಾಲೇಜಿನ ಆವರಣ, ಗೇಟ್-1, ಆಡಳಿತ ಕಚೇರಿ ಬ್ಲಾಕ್. ಬೆ.11.30. ■ **ಶಿಬಿರದ ಸಮಾರೋಪ :** ಉಚಿತ ಸಂಸ್ಕೃತ ಸಂಭಾಷಣ ಶಿಬಿರದ ಸಮಾರೋಪ ಕಾರ್ಯಕ್ರಮ. ಮೈವಿವಿ ಸಂಸ್ಕೃತ ವಿಭಾಗ. ಅತಿಥಿಗಳು: ಡಾ.ಎಚ್.ವಿ.ನಾಗರಾಜರಾವ್, ಸ್ಥಳ: ವಿಭಾಗದ ಆವರಣ, ಮಾನಸಗಂಗೋತ್ರಿ. ಮ.3.30

■ **ಪದಗ್ರಹಣ :** ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ. ಲಯನ್ಸ್ ಕ್ಲಬ್ ಆಫ್ ಮೈಸೂರು ಮಿಲೇನಿಯಂ. ಅತಿಥಿಗಳು: ಡಾ.ನಾಗರಾಜ ವಿ.ಬೈರಿ, ಎಂ.ವಿ.ದೇವಿಪ್ರಸಾದ್, ಡಿ.ಎನ್.ಚಂದ್ರಶೇಖರ್. ಸ್ಥಳ: ಒಂಟಿಕೊಪ್ಪಲು ಕ್ಲಬ್, ವಿವಿಪುರಂ ಪೊಲೀಸ್ ಠಾಣೆ ಬಳಿ. ಸಂ.6.30. ■ **ನಾಟಕ ಪ್ರದರ್ಶನ :** ಪೂರ್ಣಚಂದ್ರ ತೇಜಸ್ವಿ ಅವರ ಕಥೆ ಆಧಾರಿತ 'ಕೃಷ್ಣೇಗೌಡ ಆನೆ' ನಾಟಕ ಪ್ರದರ್ಶನ. ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ. ಸಂ.6.30.

# ಮಾನಸಗಂಗೋತ್ರಿಯಲ್ಲಿ ಸಂಸ್ಕೃತ ಸಂಭಾಷಣೆ ಶಿಬಿರ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಮೈಸೂರು ವಿವಿಯ ಸಂಸ್ಕೃತ ವಿಭಾಗದಲ್ಲಿ ಆಯೋಜಿಸಿರುವ 10 ದಿನಗಳ ಉಚಿತ ಸಂಸ್ಕೃತ ಸಂಭಾಷಣೆ ಶಿಬಿರಕ್ಕೆ ಸೋಮವಾರ ಚಾಲನೆ ದೊರೆಯಿತು.

ಮಾನಸಗಂಗೋತ್ರಿಯ ಸಂಸ್ಕೃತ ವಿಭಾಗದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿಭಾಗದ ಅಧ್ಯಕ್ಷೆ ಡಾ.ವಿಜಯಕುಮಾರಿ ಕರಿಕಲ್ ಚಾಲನೆ ನೀಡಿ, ಸಂಸ್ಕೃತ ಭಾಷೆ ಮಹಿಮೆ ಮತ್ತು ಇತಿಹಾಸದ ಕುರಿತು ಮಾಹಿತಿ ನೀಡಿದರು. ವಿಭಾಗವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು. ಎಸ್.ಸುಬ್ರಹ್ಮಣ್ಯ ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿ ಸಂಸ್ಕೃತಜ್ಞರಿಗಿರುವ ಉದ್ಯೋಗಗಳ ಮಾಹಿತಿ ನೀಡಿದರು.

» 13 ವರ್ಷ ಮೇಲ್ಪಟ್ಟವರು ಭಾಗಹಿಸಬಹುದು

ಉಪನ್ಯಾಸಕ ಡಾ.ಆರ್.ಸುರೇಶ, ಡಾ.ಎಸ್.ಎಂ.ಪುಷ್ಪಲತಾ, ಸಂಸ್ಕೃತ ಭಾರತೀಯ ಮೈಸೂರು ವಿಭಾಗದ ಸಂಯೋಜಕ ಗಣೇಶ ದತ್ತ, ಸಂಚಾಲಕಿ ಪರ್ವತವರ್ಧಿನಿ ಇದ್ದರು. ಶಿಬಿರವು ಜುಲೈ 14 ರವರೆಗೆ ಸಂಜೆ 4 ರಿಂದ 6 ಗಂಟೆತನಕ ನಡೆಯಲಿದ್ದು, 13 ವರ್ಷ ಮೇಲ್ಪಟ್ಟ ಎಲ್ಲರೂ ಭಾಗವಹಿಸಬಹುದಾಗಿದೆ.


SAN 15
SAN-13

